**ಸಿವಿಲ್ ಜಡ್ಜ್ ಹಾಗೂ ಹೆ.ಪ್ರ.ದ.ನ್ಯಾ.ದಃ ನ್ಯಾಯಾಲಯಃ ತರೀಕೆರೆ**

**ಸಿ.ಸಿ ಸಂಖ್ಯೆ ::1084/2024**

| | | | |
|---|---|---|---|
| **ಸಾಕ್ಷಿದಾರರ ಹೆಸರು** | : | ಡಾಃ ದೇವರಾಜ್ | **PW-6** |
| **ತಂದೆಯ ಹೆಸರು** | : | ಮಹೇಶ್ವರಪ್ಪ | **CW-13** |
| **ವಯಸ್ಸು** | : | 56 ವರ್ಷ | |
| **ಉದ್ಯೋಗ** | : | ಕೀಲು ಮತ್ತು ಮೂಳೆ ತಜ್ಞರು | |
| **ವಾಸಸ್ಥಳ** | : | ಬೀರೂರು | |

**ದಿನಾಂಕಃ01-09-2025 ರಂದು ಪ್ರಮಾಣವಚನ ಬೋಧಿಸಲಾಯಿತು.**

**:: ಮುಖ್ಯ ವಿಚಾರಣೆ :: ಮಾನ್ಯ A.P.P ರವರಿಂದ ::**

ನಾನು 17.06.2005 ರಿಂದ 11.07.2025 ರವರೆಗೂ ತರೀಕೆರೆಯ ಸರ್ಕಾರಿ ಆಸ್ಪತ್ರೆಯಲ್ಲಿ ಕೀಲು ಮತ್ತು ಮೂಳೆ ತಜ್ಞರಾಗಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

ದಿನಾಂಕ 23.02.2024 ಬೆಳಗ್ಗೆ 11.00 ಗಂಟೆ ಸಮಯದಲ್ಲಿ ಅಪಘಾತದಿಂದ ಆದ ಗಾಯಗಳಿಗಾಗಿ ಚಾಸಾ 2 ಹಾಗೂ ಚಾಸಾ 3 ರವರು ಚಿಕಿತ್ಸೆಗೆ ಬಂದಿದ್ದು, ಅವರನ್ನು ಪರೀಕ್ಷೆ ಮಾಡಿದ್ದು, ಚಾಸಾ 2 ರವರಿಗೆ ಈ ಕೆಳಕಂಡ ಗಾಯಗಳು ಆಗಿರುತ್ತವೆಃ

1. ಹಣೆಯ ಮೇಲ್ಭಾಗದಲ್ಲಿ 2 x ½ x ½ cm ಆಗ ತಾನೆ ಆದ ಹರಿದ ಗಾಯ

2. ಹಣೆಯ ಮೇಲೆ ಅಲ್ಲಲ್ಲಿ ತರಚಿದ ಗಾಯಗಳು

3. ಎದೆ ಮತ್ತು ಬೆನ್ನಿನ ಮೇಲೆ ನೋವಿನ ಅನುಭವ ಇದ್ದು ಗಾಯಳುವಿನ ಹೆಚ್ಚಿನ ಚಿಕಿತ್ಸೆಗೆ ಶಿವಮೊಗ್ಗಕ್ಕೆ ಕಳುಹಿಸಿಕೊಟ್ಟಿದ್ದು, ಅವರು ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಯಲ್ಲಿ ಹೆಚ್ಚಿನ ಚಿಕಿತ್ಸೆ ಪಡೆದಿರುತ್ತಾರೆ. ಅವರಿಗೆ ಬಲ ಪಕ್ಕೆಯ ಮೂಳೆಗಳಾದ 2, 3, 4, 5, 11 ಮೂಳೆಗಳು ಮುರಿದಿರುತ್ತವೆ ಎಂದು ತಿಳಿಸಿರುತ್ತಾರೆ.

ನನ್ನ ಪ್ರಕಾರ ಮೇಲ್ಕಂಡ ಗಾಯಗಳಾದ 1 ಮತ್ತು 2 ಸಾಮಾನ್ಯ ಸ್ವರೂಪದಾಗಿದ್ದು, ಗಾಯ 3 ತೀವ್ರ ಸ್ವರೂಪಾದ ಗಾಯಗಳಾಗಿರುತ್ತವೆ.

ಚಾಸಾ 3 ರವರಿಗೆ ಈ ಕೆಳಕಂಡ ಗಾಯಗಳು ಆಗಿರುತ್ತವೆಃ

1. ತಲೆಯ ಮೇಲೆ ಮತ್ತು ಬಲ ತಲೆಯ ಭಾಗದಲ್ಲಿ 3 x 2 x 1 cm ಆಗ ತಾನೆ ಆದ ಹರಿದ ಗಾಯ

2. ಬಲ ಭುಜದ ಮೇಲೆ ಆಗ ತಾನೆ ತರಚಿದ ಗಾಯ 2 x 1 cm .

3. ಹಣೆಯ ಮೇಲೆ ಹರಿದ ಗಾಯ 2 x ½ x ½ cm.

4. ಯಳುವಿನ ಹೆಚ್ಚಿನ ಚಿಕಿತ್ಸೆಗೆ ಶ್ರೀನಿವಾಸ ಮಂಗಳೂರು ಆಸ್ಪತ್ರೆಯಲ್ಲಿ ದಾಖಲಾಗಿದ್ದು, ಅವರಿಗೆ ಬಲಗಡೆಯ ಕೆನ್ನೆಯ ಮೂಳೆಯು ಮುರಿತ ಆಗಿರುವುದಾಗಿ ತಿಳಿಸಿರುತ್ತಾರೆ.

ನನ್ನ ಪ್ರಕಾರ ಮೇಲ್ಕಂಡ ಗಾಯಗಳಾದ 1 ರಿಂದ 3 ಸಾಮಾನ್ಯ ಸ್ವರೂಪದಾಗಿದ್ದು, ಗಾಯ 4 ತೀವ್ರ ಸ್ವರೂಪಾದ ಗಾಯಗಳಾಗಿರುತ್ತವೆ.

ಸಾಕ್ಷಿಯ ದಿಃ 19.06.2024 ಹಾಗೂ 24.07.2024 ರ ಗಾಯದ ಪ್ರಮಾಣಪತ್ರದಲ್ಲಿ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು ನಿಪಿ 14 ಮತ್ತು 15 ಎಂದು ಹಾಗೂ ಸಾಕ್ಷಿಯ ಸಹಿಗಳನ್ನು ನಿಪಿ14 ಎ ಮತ್ತು 15 ಎ ಎಂದು ಗುರುತಿಸಲಾಯಿತು.

**:: ಪಾಟೀ ಸವಾಲು :: ಆರೋಪಿತರ ಪರ ಶ್ರೀಮತಿ ಎಸ್ ಎಂ ವಕೀಲರಿಂದ ::**

ನಾನು ಹೇಳುತ್ತಿರುವ ಗಾಯಗಳು ಗಾಡಿಯಿಂದ ಮಣ್ಣಿನ ರಸ್ತೆಯಲ್ಲಿ ಬಿದ್ದರೆ ಆಗುವ ಸಾಧ್ಯತೆ ಇರುತ್ತದೆ ಎಂದರೆ ಸರಿಯಲ್ಲ. ನಾನು ಸುಳ್ಳು ಗಾಯದ ಪ್ರಮಾಣಾಪತ್ರಗಳನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಪೊಲೀಸರಿಗೆ ಸಹಾಯ ಮಾಡಲು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**:: ಮರುವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

sd/-

ಸಿ.ಜೆ. ಮತ್ತು ಹೆ. ಜೆ.ಎಮ್.ಎಫ್.ಸಿ.,

ತರೀಕೆರೆ

ಸಾಕ್ಷಿಯ ಸಹಿ::